ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು , ಕಲಘಟಗಿ

ಸಿಸಿ ನಂಃ 323-18

**ಚಾಸಾಃ 3**

**ಪ್ರಾಸಾಃ 8**

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 04.10.2019 ರಂದು ಪ್ರಮಾಣ ಮಾಡಿಸಲಾಯಿತು.

ಸಾಕ್ಷಿಯ ಹೆಸರು : ಮೂಗಪ್ಪ ತಡಸ
ತಂದೆಃ ಗಂಡ ಹೆಸರು : ನಿಂಗಪ್ಪ
ಉದ್ಯೋಗ : ಶೇತ್ಕಿ
ವಯಸ್ಸು : 45
ವಾಸಸ್ಥಳ : ತಬಕದಹೊನ್ನಳ್ಳಿ
ಪ್ರಾರಂಭ ಸಮಯ : 03.45 ಎ ಎಂ.
ಮುಖ್ಯ ವಿಚಾರಣೆ ಎಪಿಪಿ ಅವರಿಂದಃ

ಈಗ ಪಂಚನಾಮೆ ಮತ್ತು ಹತ್ ನಕಾಶೆಯನ್ನು ನೋಡಿದ್ದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ 2ಸಿ ಮತ್ತು ನಿಪಿ 3ಸಿ ಅಂತ ಗುರುತಿಸಲಾಯಿತು. ದಿಃ 27.05.2017 ರಂದು ಕ್ರಿಸ್ಚಿಯನ್ ಚರ್ಚ್ ಹತ್ತಿರ ಪರಸಪುರ ಕ್ರಾಸ್, ತಡಸ-ಕಲಘಟಗಿ ರಸ್ತೆಯ ಮಧ್ಯೆ ಅಪಘಾತದ ಹಿನ್ನಲೆಯಲ್ಲಿ ಪಂಚನಾಮೆಗೆ ಸದರಿ ಸಹಿಯನ್ನು ಮಾಡಿರುತ್ತೇನೆ. ಪಂಚನಾಮೆಯನ್ನು ಬೆಳಿಗ್ಗೆ 9 ರಿಂದ 10.30 ರವರಗೆ ಪಂಚನಾಮೆಯನ್ನು ಮಾಡಿರುತ್ತಾರೆ. ಪಂಚನಾಮೆಯ ಮಾಡುವ ಕಾಲಕ್ಕೆ ನಾನು ಮತ್ತು ಇನ್ನೊಬ್ಬ ವ್ಯಕ್ತಿ ಇದ್ದೇವು. ಚಾಸಾ 1 ರವರು ಜಾಗೆಯನ್ನು ತೋರಿಸಿರುತ್ತಾರೆ. ಸದರಿ ಪಂಚನಾಮೆಯ ಕಾಲಕ್ಕೆ ಫ್ರೋಟೋವನ್ನು ತೆಗೆದಿದ್ದು, ಅದನ್ನು ನಿಪಿ 4 ಅಂತ ಗುರುತಿಸಲಾಯಿತು. ಸದರಿ ಫೊಟೋದಲ್ಲಿ ನಾನು ಇರುತ್ತೇನೆ.

ಪಾಟೀ ಸವಾಲು : ಆರೋಪಿ ಪರ ಶ್ರೀ ವಿ ಅರ್ ಜಿ ವಕೀಲರಂದಃ

ಚಾಸಾ 23 ರವರು ನನಗೆ ಪಂಚನಾಮೆಗೆ ಬರಲು ವಿನಂತಿಸಿಕೊಂಡರು ಅಂದರೆ ಸರಿ. ನಾನು ಅಪಘಾತವಾದ ನಂತರ ನಾನು ನೋಡಲು ಹೋದಾಗ ಪಂಚನಾಮೆಗೆ ಕರೆದಿರುತ್ತಾರೆ. ಚಾಸಾ 23 ರವರು ಪೋಲೀಸ್ ನಿರೀಕ್ಷರು ಇರುವುದರಿಂದ ಅವರ ಪರಿಚಯ ಇರುತ್ತದೆ. ಪೋಲೀಸರ್ ಠಾಣೆಯ ಸಂಪರ್ಕ ನನಗೆ ಚೆನ್ನಾಗಿ ಇರುತ್ತದೆ ಅಂದರೆ ಸರಿಯಲ್ಲ. ಪಂಚನಾಮೆಯನ್ನು ಮಾಡುವ ಕಾಲಕ್ಕೆ ಚಾಸಾ 1 ರವರು ಅಡ್ಡ ಹೆಸರು ನನಗೆ ಗೊತ್ತಿರಲಿಲ್ಲ. ಆದರೆ ಅವರು ಪಂಚನಾಮೆಯ ಕಾಲಕ್ಕೆ ಮಾತನಾಡುವಾಗ ನನಗೆ ಅವರ ಅಡ್ಡ ಹೆಸರು ಹೈಗಾರ್ ಅಂತ ಗೊತ್ತಾಗಿರುತ್ತದೆ. ಘಟನೆಯ ದಿನಾಂಕ ನನಗೆ ಗೊತ್ತಿರುತ್ತದೆ. ನನಗೆ ಅಪಘಾತಕೊಳಗಾದ ವಾಹನಗಳ ನಂಬರ್ ಹೇಳಲು ಬರುವುದಿಲ್ಲ. ಅಪಘಾತವು ಅಮವಾಸ್ಯೆಯ ದಿನ ಸಂಜೆ ಆಗಿರುತ್ತದೆ. 2 ಬೈಕ್‌ಗಳ ನಡುವೆ ಅಪಘಾತವಾಗಿತ್ತು. ಇನ್ನೊಂದು ಟ್ರಾಕ್ಸ್ ವಾಹನ ಅಪಘಾತಪಡಿಸಿರುತ್ತದೆ ಅಂತ ಜನರು ಮಾತನಾಡುತ್ತಿದ್ದರು. ಸಹಿಯನ್ನು ನಾನು ಜಾಗೆಯಲ್ಲಿ ಮಾಡಿರುತ್ತೇನೆ. ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಅಂದರೆ ಸರಿಯಲ್ಲ. ಅಪಘಾತವಾದ ದಿನ

ಯೂವುದು ಅಂತ ನನಗೆ ನೆನಪಿಲ್ಲ ಆದರೆ ದಿನಾಂಕ ನೆನಪಿರುತ್ತದೆ. ಚಾಸಾ 2 ರವರ ಪರಿಚಯ ನನಗೆ ಇಲ್ಲ.

(ಮರು ವಿಚಾರಣೆ ಇಲ್ಲ)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಅದೆ,

ಸಹಿ/-

ದಿವಾಣಿ ನ್ಯಾಯಾಧೀಶರು ಹಾಗೂ

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು

ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು , ಕಲಘಟಗಿ

ಸಿಸಿ ನಂಃ 323-18

**ಚಾಸಾಃ 13**

**ಪ್ರಾಸಾಃ 7**

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 04.10.2019 ರಂದು ಪ್ರಮಾಣ ಮಾಡಿಸಲಾಯಿತು.

ಸಾಕ್ಷಿಯ ಹೆಸರು : ಪರಶಪ್ಪ ಮ್ಯಾಗಿನಮನಿ
ತಂದೆಃ ಗಂಡ ಹೆಸರು : ಫಕಿರಪ್ಪ
ಉದ್ಯೋಗ : ಶೇತ್ಕಿ
ವಯಸ್ಸು : 55
ವಾಸಸ್ಥಳ : ಯರೇಬೂದಿಹಾಳ

ಪ್ರಾರಂಭ ಸಮಯ : 03.25 ಎ ಎಂ.
ಮುಖ್ಯ ವಿಚಾರಣೆ ಎಪಿಪಿ ಅವರಿಂದಃ

ಮೃತ ಶ್ರೀಕಾಂತರವರು ನಮ್ಮ ಅಳಿಯರಾಗಿದ್ದರು. ಅವರು ಹುಬ್ಬಳ್ಳಿ ಕಿಮ್ಸ ಆಸ್ಪತ್ರೆಯಲ್ಲಿ ಮೃತರಾಗಿರುತ್ತಾರೆ. ಅವರು ಯಾವ ಕಾರಣದಿಂದ ಮೃತರಾಗಿರುತ್ತಾರೆ ಅನ್ನುವುದು ಗೊತ್ತಿಲ್ಲ. ಅಪಘಾತದಲ್ಲಿ ಅವರು ಮೃತರಾಗಿರುತ್ತಾರೆ ಅಂತ ನನಗೆ ಗೊತ್ತಿಲ್ಲ. ಅವರು ಸುಮಾರು 1 ವರ್ಷದ ಹಿಂದೆ ಮೃತರಾಗಿರುತ್ತಾರೆ. ಶವ ತನಿಖಾ ವರದಿಯನ್ನು ಮಾಡುವಾಗ ನಾನು ಹಾಜರಿರಲಿಲ್ಲ. ಘಟನೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ, ಅರೋಪಿಯ ಬಗ್ಗೆ ನನಗೆ ಗೊತ್ತಿಲ್ಲ. ನಾನು ಪೋಲೀಸರ ಮುಂದೆ ಹೇಳಿಕೆಯನ್ನು ನೀಡಿಲ್ಲ, ಅರೋಪಿತರನ್ನು ತೋರಿಸಿ ನನ್ನ ಮರು ಹೇಳಿಕೆಯನ್ನು ಪೋಲೀಸರು ಪಡೆದಿದ್ದಾರೆ. ಇಷ್ಟನ್ನು ಬಿಟ್ಟು ಬೇರೆ ಏನು ನನಗೆ ಗೊತ್ತಿಲ್ಲ.

(ಎಪಿಪಿ ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

ಪಾಟೀ ಸವಾಲು ಎಪಿಪಿ ರವರಿಂದಃ

ದಿಃ 25.05.2017 ರಂದು ಚಾಸಾ 10 ಹಾಗೂ ನನ್ನ ಅಳಿಯ ಶ್ರೀಕಾಂತ್ ರವರು ಸೇರಿ ಅವರ ಮೋಟಾರ್ ಸೈಕಲ್ ಕೆಎ25 ಇಎಫ್ 9963ನೇದ್ದರಲ್ಲಿ ತಬಕದ ಹೊನ್ನಳ್ಳಿಯ ದೇವಸ್ಥಾನಕ್ಕೆ ಹೋಗಿ ಮರಳಿ ಬರುವಾಗ ಪರಸಪ್ಪರ ಕ್ರಾಸ್ ಬಳಿ ಬರುವಾಗ ಮಧ್ಯಾಹ್ನ 3-30 ಗಂಟೆ ಸುಮಾರಿಗೆ ಅರೋಪಿತನು ತಾನು ನಡೆಸುತ್ತಿದ್ದ ಕ್ರೂಸರ್ ವಾಹನ ನಂ ಕೆಎ27 ಎ5026 ನೇದ್ದನ್ನು ಕಲಘಟಗಿ ಕಡೆಯಿಂದ ತಡಸದ ಕಡೆಗೆ ಅತೀವೇಗವಾಗಿ ಅಲಕ್ಷ್ಯತನದಿಂದ ರಾಂಗ್ ಸೈಡ್‌ನಲ್ಲಿ ನಡೆಸಿಕೊಂಡು ಬಂದು ತಡಸ ಕಡೆಯಿಂದ ಕಲಘಟಗಿ ಕಡೆಗೆ ಬರುತ್ತಿದ್ದ ಮೋಟಾರ್ ಸೈಕಲ್ ನಂ ಕೆಎ 25 ಇಎಫ್ 9963ನೇದ್ದಕ್ಕೆ ಡಿಕ್ಕಿ ಮಾಡಿ ಅಪಘಾತಪಡಿಸಿ, ತಡಸ ಕಡೆಗೆ ಹೊರಟಿದ್ದ ಇನ್ನೊಂದು ಮೋಟಾರ್ ಸೈಕಲ್ ನಂ ಕೆಎ25 ಇವಿ6070ನೇದ್ದಕ್ಕೆ ಹಿಂದಿನಿಂದ ಡಿಕ್ಕಿ ಮಾಡಿ ಅಪಘಾತಪಡಿಸಿ ಅದರ ಸವಾರ ಟೋಪಣ್ಣ ತಿಪ್ಪಣ್ಣವರ್ ಸಾಃ ಮಳಳ್ಳಿ ಎಂಬುವವರಿಗೆ ಬಾರಿ ಗಾಯಪಡಿಸಿ ಅವರು ಉಪಚಾರ ಫಲಿಸದೆ ಸಂಜೆ 6 ಗಂಟೆ ಸುಮಾರಿಗೆ ಮರಣ ಹೊಂದುವಂತೆ ಮಾಡಿದ್ದಾರೆ ಅಂದರೆ ಸರಿಯಲ್ಲ. ಅದೇ ದಿನ ಅಪಘಾತದಲ್ಲಿ ನನ್ನ ಅಳಿಯ ಶ್ರೀಕಾಂತರವರಿಗೂ ಭಾರಿ ಗಾಯಪಡಿಸಿ ಉಪಚಾರ ಫಲಿಸದೇ ರಾತ್ರಿ 7-30 ಗಂಟೆ ಸುಮಾರಿಗೆ ಮರಣ ಹೊಂದುವಂತೆ ಮಾಡಿರುತ್ತಾರೆ ಅಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ಚಾಸಾ 10 ಹಾಗೂ ಚಾಸಾ 11 ರವರಿಗೂ ಸಹ ಭಾರಿ ಗಾಯಪಡಿಸಿ

ಅರೋಪಿಯು ತನ್ನ ವಾಹನವನ್ನು ನಿಲ್ಲಿಸದೇ ಗಾಯಳುಗಳಿಗೆ ಉಪಚಾರಕ್ಕೆ ಸಹಕರಿಸದೇ ಸ್ಥಳದಿಂದ ಪರಾರಿಯೊಗಿದ್ದ ಅಂದರೆ ಸರಿಯಲ್ಲ. ಸದರಿ ಅಪಘಾತದಿಂದ ಇನ್ನೊಂದು ಮೋಟಾರ್ ಬೈಕ್‌ನ ಸವಾರನು ಚಾಸಾ 11 ಅಂತ ತಿಳಿಯಿತು ಅಂದರೆ ಸರಿಯಲ್ಲ. ಸದರಿ ವಿಷಯವನ್ನು ಚಾಸಾ 10 ರವರು ನನಗೆ ತಿಳಿಸಿದ್ದರು ಅಂದರೆ ಸರಿಯಲ್ಲ. ಈ ಬಗ್ಗೆ ಪೋಲೀಸರು ನನ್ನನ್ನು ವಿಚಾರಿಸಿ ನಿಪಿ 19 ರಂತೆ ಹೇಳಿಕೆ ಪಡೆದರು ಅಂದರೆ ಸರಿಯಲ್ಲ. ಈಗ ಎಲ್ಲಾ ವಿಚಾರ ಗೊತ್ತಿದ್ದರು ನಿಪಿ 19 ರಂತೆ ಹೇಳಿಕೆ ನೀಡಿ, ನಿಪಿ 20 ರಂತೆ ಮರು ಹೇಳಿಕೆ ನೀಡಿ ಈಗ ಅರೋಪಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಪಾಟೀ ಸವಾಲು : ಆರೋಪಿ ಪರ ವಕೀಲರಂದಃ

ವಕೀಲರು ಗೈರು ಹಾಜರಿದ್ದು ಪಾಟೀ ಸವಾಲು ಇಲ್ಲ ಅಂತ ತೆಗೆದುಕೊಳ್ಳಲಾಯಿತು.

(ಮರು ವಿಚಾರಣೆ ಇಲ್ಲ)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಅದೆ,

ಸಹಿ/-

ದಿವಾಣಿ ನ್ಯಾಯೊಧೀಶರು ಹಾಗೂ

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು

<u>ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು , ಕಲಘಟಗಿ</u>

ಸಿಸಿ ನಂಃ 323-18

**ಚಾಸಾಃ 23**

**ಪ್ರಾಸಾಃ 6**

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 04.10.2019 ರಂದು ಪ್ರಮಾಣ ಮಾಡಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ಃ ಶ್ರೀನಿವಾಸ ಹಾಂಡಾ |
| ತಂದೆಃ ಗಂಡ ಹೆಸರು | ಃ ಮಂಜು |
| ಉದ್ಯೋಗ | ಃ ಪಿ ಐ, ಡಿ ಜಿ ಪಿ ಕಚೇರಿ, ಬೆಂಗಳೂರು, |
| ವಯಸ್ಸು | ಃ 56 |
| ವಾಸಸ್ಥಳ | ಃ ಬೆಂಗಳೂರು |

ಪ್ರಾರಂಭ ಸಮಯ ಃ 03.15 ಎ ಎಂ.

ಮುಖ್ಯ ವಿಚಾರಣೆ ಎಪಿಪಿ ಅವರಿಂದಃ

ನಾನು ದಿಃ 15.07.2016 ರಿಂದ 24.07.2017 ರವರೆಗೆ ನಾನು ಕಲಘಟಗಿ ಪೋಲೀಸ್ ಠಾಣೆಯಲ್ಲಿ ಪಿ ಐ ಅಂತ ಕರ್ತವ್ಯವನ್ನು ನಿರ್ವಹಿಸಿದ್ದೇನೆ.

ದಿಃ 27.05.2017 ರಂದು ಕಡತವನ್ನು ಚಾಸಾ 22 ರವರಿಂದ ಪಡೆದು ಪರಿಶೀಲಿಸಿರುತ್ತೇನೆ. ಘಟನಾ ಸ್ಥಳಕ್ಕೆ ಭೇಟಿ ನೀಡಿ ಚಾಸಾ 2 ಮತ್ತು 3 ರವರ ಸಮಕ್ಷಮ ಚಾಸಾ 1 ರವರು ತೋರಿಸಿದ ಗುನ್ನಾ ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿ ಕಚ್ಚಾ ಹತ್ ನಕಾಶೆಯನ್ನು ತೆಗೆದಿರುತ್ತೇನೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ 2 ಅಂತ ಗುರುತಿಸಲಾಗಿದ್ದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ 2ಬಿ ಅಂತ ಗುರುತಿಸಲಾಯಿತು.

ಕಚ್ಚಾ ಹತ್ ನಕಾಶೆಯನ್ನು ಈಗಾಗಲೇ ನಿಪಿ 3 ಅಂತ ಗುರುತಿಸಲಾಗಿದ್ದು, ಅದರಲ್ಲಿರು ವನನ್ನ ಸಹಿಯನ್ನು ನಿಪಿ 3ಬಿ ಅಂತ ಗುರುತಿಸಲಾಯಿತು. ಘಟನಾ ಸ್ಥಳದಲ್ಲಿ ಪಂಚನಾಮೆ ಮಾಡುವ ಕಾಲಕ್ಕೆ ಛಾಯಾಚಿತ್ರವನ್ನು ತೆಗೆದಿದ್ದು, ಅದನ್ನು ನಿಪಿ 4 ಅಂತ ಗುರುತಿಸಲಾಯಿತು.

ಅಪಘಾತಕ್ಕೊಳಗಾದ ವಾಹನಗಳನ್ನು ಯಾಂತ್ರಿಕ ಪರೀಕ್ಷೆಗೆ ತಡೆದಿರುತ್ತೇನೆ. ಚಾಸಾ 12 ಮತ್ತು 13 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ಅಪಘಾತಪಡಿಸಿದ ಕ್ರೂಸರ್ ವಾಹನ ಕೆಎ 27ಎ 5026 ಇದನ್ನು ವಾಹನದ ಮಾಲೀಕನಿಗೆ ನೋಟೀಸ್ ನೀಡಿರುತ್ತೇನೆ. ಅದರ ನೋಟೀಸ್‌ನ್ನು ಈಗ ನೋಡಿದ್ದು, ಅದನ್ನು ನಿಪಿ 12 ಅಂತ, ಸಾಕ್ಷಿ ಸಹಿ ನಿಪಿ 12 ಎ ಅಂತ ಗುರುತಿಸಲಾಯಿತು. ದಿಃ 10.06.2017 ರಂದು ಪಿ ಎಂ ವರದಿಯನ್ನು ಪಡೆದಿರುತ್ತೇನೆ. ಅದನ್ನು ಈಗ ನೋಡಿದ್ದು, ಅದನ್ನು ನಿಪಿ 13 ಅಂತ, ಸಾಕ್ಷಿ ಸಹಿ ನಿಪಿ 13ಎ ಅಂತ ಗುರುತಿಸಲಾಯಿತು. ದಿಃ 21.06.2017 ರಂದು ನಷ್ಟ ಭರ್ತಿ ಪತ್ರವನ್ನು ಪಡೆದು ಬೆಳಿಗ್ಗೆ 11 ರಿಂದ 12 ಗಂಟೆಯವರೆಗೆ ಚಾಸಾ 8 ಮತ್ತು 9 ರವರ ಸಮಕ್ಷಮ ಚಾಸಾ 15 ರವರು ಹಾಜರುಪಡಿಸಿದ ವಾಹನವನ್ನು ಜಪ್ತು ಪಂಚನಾಮೆ ಮಾಡಿ ಪಡೆದಿರುತ್ತೇನೆ. ಅದನ್ನು ನಿಪಿ 14 ಅಂತ, ಸಾಕ್ಷಿ ಸಹಿ ನಿಪಿ 14ಎ ಅಂತ ಗುರುತಿಸಲಾಯಿತು. ಜಪ್ತಾದ ವಾಹನವನ್ನು ಯಾಂತ್ರಿಕ ಪರೀಕ್ಷಾ ಮಾಡಲು ಆರ್ ಟಿ ಓ ರವರಿಗೆ ನಿವೇದಿಸಿಕೊಂಡಿರುತ್ತೇನೆ. ಚಾಸಾ 15 ರವರು ನರ್ಷ ಭರ್ತಿ

ಪತ್ರುವನ್ನು ನೀಡಿದ್ದು, ಕ್ರೂಸರ್ ವಾಹನವನ್ನು ಚಾಸಾ 15 ರವರಿಗೆ ಬಿಟ್ಟುಕೊಟ್ಟಿರುತ್ತೇನೆ. ನಷ್ಟ ಭರ್ತಿಡ ಪತ್ರುವನ್ನು ಈಗ ನೋಡಿದ್ದು, ಅದನ್ನು ನಿಪಿ 15 ಅಂತ, ಸಾಕ್ಷಿ ಸಹಿ ನಿಪಿ 15 ಎ ಅಂತ ಗುರುತಿಸಲಾಯಿತು. ದಿಃ 24.06.2017 ರಂದು ಚಾಸಾ 10 ರಿಂದ 13 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ಅದೇ ದಿನ ಅರೋಪಿತನನ್ನು ದಸ್ತಗಿರಿ ಮಾಡಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿಃ 17.07.2017 ರಂದು ವಾಹನದ ಯಾಂತ್ರಿಕ ಪರೀಕ್ಷಾ ವರದಿಯನ್ನು ಪಡೆದಿರುತ್ತೇನೆ. ಅದನ್ನು ನಿಪಿ 16 ಅಂತ, ಸಾಕ್ಷಿ ಸಹಿ ನಿಪಿ 16ಎ ಅಂತ ಗುರುತಿಸಲಾಯಿತು. ದಿಃ 22.07.2017 ರಂದು ಗಾಯದ ಪ್ರಮಾಣ ಪತ್ರುವನ್ನು ಚಾಸಾ 11 ರವರ ಗಾಯದ ಪ್ರಮಾಣ ಪತ್ರುವನ್ನು ಚಾಸಾ 10 ಮತ್ತು 11 ರವರಿಂದ ಪಡೆದು ಅದನ್ನು ನಿಪಿ 17 ಮತ್ತು ನಿಪಿ 18 ಅಂತ, ಸಾಕ್ಷಿ ಸಹಿಗಳನ್ನು ನಿಪಿ 17ಎ ಮತ್ತು ನಿಪಿ 18ಎ ಅಂತ ಗುರುತಿಸಲಾಯಿತು. ಅರೋಪಿತರ ಮೇಲೆ ದೋಷರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಅರೋಪಿತನನ್ನು ಈಗ ನ್ಯಾಯಾಲಯದ ಮುಂದೆ ನೋಡಿ ಗುರುತಿಸಿರುತ್ತೇನೆ. ಅರೋಪಿತನು ಅಪಘಾತಪಡಿಸಿದ ನಂತರ ಸ್ಥಳದಲ್ಲಿ ಗಾಯಾಳುಗಳಿಗೆ ಚಿಕಿತ್ಸೆಯನ್ನು ನೀಡದೇ ಮತ್ತು ಪೋಲೀಸರಿಗೆ ಮಾಹಿತಿಯನ್ನು ನೀಡಿದೆ ವಾಹನ ಸಮೇತ ಪರಾರಿಯಾಗಿರುತ್ತಾನೆ. ಅರೋಪಿತರ ಮೇಲೆ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ಪಾಟೀ ಸವಾಲು ಃ ಆರೋಪಿ ಪರ ಶ್ರೀ ವಿ ಅರ್ ಜಿ ವಕೀಲರಿಂದಃ

ಗುನ್ನಾ ಸ್ಥಳದ ಪಂಚನಾಮೆಗೆ ಜಾಗೆಯನ್ನು ಚಾಸಾ 1 ರವರು ತೋರಿಸಿರುತ್ತಾರೆ. ಪಂಚನಾಮೆ ಮಾಡುವ ಕಾಲಕ್ಕೆ ನಮ್ಮ ಸಿಬ್ಬಂದಿಯವರು ಇದ್ದರು ಅವರ ಹೆಸರು ನನಗೆ ಈಗ ನೆನಪಿಲ್ಲ. ಪಿರ್ಯಾದಿದಾರರೇ ಪಂಚರನ್ನು ಕರೆಸಿರುತ್ತಾರೆ. ಪಂಚರುದಾರರ ಹೇಳಿಕೆಯನ್ನು ತೆಗೆದುಕೊಂಡಿಲ್ಲ ಅಂದರೆ ಸರಿ. ಪಂಚರು ಯಾವ ಊರಿನವರು ಅಂತ ನನಗೆ ಗೊತ್ತಿರುತ್ತದೆ. ಚಾಸಾ 2 ಪರಶಪುರ ಊರಿನವರು ಮತ್ತು ಚಾಸಾ 3 ರವರು ತಬಕದಹೊನ್ನಳ್ಳಿಯವರು ಆಗಿರುತ್ತಾರೆ. ಪಂಚರನ್ನು ಕರೆಯಿಸಿ ಪೋಟೋ ತೆಗೆದಿದ್ದೇವೆ. ಪಿರ್ಯಾದುದಾರರ ಮರುಹೇಳಿಕೆಯನ್ನು ಠಾಣೆಯಲ್ಲಿ ಪಡೆದಿರುತ್ತೇನೆ. ಗಾಯಾಳುಗಳಾದ ಚಾಸಾ 10 ರಿಂದ 13 ರವರ ಹೇಳಿಕೆಯನ್ನು ಪಡೆದಿಲ್ಲ ಅಂದರೆ ಸರಿಯಲ್ಲ. 2 ದ್ವಿಚಕ್ರ ವಾಹನದ ಹಿಂಬದಿಯಲ್ಲಿ ಕುಳಿತಿದ್ದ ಸವಾರನ ಹೇಳಿಕೆಯನ್ನು ಪಡೆದಿಲ್ಲ ಅಂದರೆ ಸರಿಯಲ್ಲ. ದ್ವಿಚಕ್ರ ವಾಹನದ ಲೈಸೆನ್ಸ್ ಅನ್ನು ನಾನು ಪಡೆದಿಲ್ಲ ಅಂದರೆ ಸರಿಯಲ್ಲ. ದ್ವಿಚಕ್ರ ವಾಹನದ ಚಾಲಕರ ಚಾಲನಾ ಪರವಾನಗೆ ಪತ್ರುವನ್ನು ನಾನು ಪಡೆದಿಲ್ಲ ಅಂದರೆ ಅವರು ನನ್ನ ಮುಂದೆ ಹಾಜರುಪಡಿಸಿಲ್ಲ. ಅವರ ಹತ್ತಿರ ಲೈಸೆನ್ಸ್ ಇತ್ತು ಇಲ್ಲವೋ ಅನ್ನುವುದರ ಬಗ್ಗೆ ಪರಿಶೀಲನೆ ಮಾಡಿಲ್ಲ ಅಂದರೆ ವಾಹನದ ಮಾಲೀಕರನ್ನು ನನ್ನ ಮುಂದೆ ಹಾಜರುಪಡಿಸಿಲ್ಲ. ದ್ವಿಚಕ್ರ ವಾಹನದ ಮಾಲೀಕರು ಮತ್ತು ಅದರ ಚಲಾಯಿಸಿ ಮಾಲೀಕರು ಬೇರೆಯಾಗಿದ್ದಾರೆ ಅಂದರೆ ಸರಿ.ಕ್ರೂಸರ್ ವಾಹನದ ಚಾಲಕರು ಇವರೇ ಅಂತ ಯಾರ ಹೇಳಿಕೆ ಮೇಲೆ ನಾನು ಹೇಳುತ್ತಿದ್ದೇನೆ ಅಂದರೆ ಸಾಕ್ಷಿದಾರರ ಹೇಳಿಕೆಯ ಮೇಲೆ ನಾನು ಹೇಳುತ್ತಿದ್ದೇನೆ. ಸಾಕ್ಷಿದಾರರು ಸುಳ್ಳು ಮಾಹಿತಿಯನ್ನು ನೀಡಿದ್ದರಿಂದ ಅರೋಪಿತನ ಮೇಲೆ ಸುಳ್ಳು ದೂರನ್ನು ಸಲ್ಲಿಸಲಾಗಿದೆ ಅಂದರೆ ಸರಿಯಲ್ಲ. ಅರೋಪಿತನು ಕಲಘಟಗಿ ತಡಸ್ ಕಡೆಗೆ ಹೋಗಿತ್ತಿರುವ ಒಂದು ದ್ವಿಚಕ್ರ ವಾಹನಕ್ಕೆ ಎದುರುಗಡೆಯಿಂದ ಬರುತ್ತಿದ್ದ ಇನ್ನೊಂದು ದ್ವಿಚಕ್ರ ವಾಹನಕ್ಕೆ ಅಪಘಾತವಾಗಿದೆ ಅಂದರೆ ಕ್ರೂಸರ್ ವಾಹನಕ್ಕೂ ಸಹ ಅಪಘಾತವಾಗಿದೆ ಅಂದರೆ ಸರಿಯಲ್ಲ. ಅರೋಪಿತನು ಯಾವುದೇ ತಪ್ಪು ಮಾಡಿಲ್ಲ ಅಂದರೆ ಸರಿಯಲ್ಲ. ನಾನು ಯಾವುದೇ ಜಪ್ತು ಮತ್ತು ಶವ ಪಂಚನಾಮೆ ಮಾಡಿಲ್ಲ ಅಂದರೆ ಸರಿಯಲ್ಲ. ಚಾಸಾ 10 ರಿಂದ 13 ರವರ ಹೇಳಿಕೆಯನ್ನು ಮತ್ತು ಚಾಸಾ 1 ರವರ ಮರುಹೇಳಿಕೆಯನ್ನು ಠಾಣೆಯಲ್ಲಿಯೇ ತಯಾರಿಸಿದ್ದೇನೆ ಅಂದರೆ ಸರಿಯಲ್ಲ. ಚಾಸಾ 1 ರವರ ಮರು ಹೇಳಿಕೆಯನ್ನು ದಿಃ 26.07.2017 ರಂದು ಪಡದಿರುತ್ತೇನೆ. ಚಾಸಾ 1 ರವರು ಹೇಳಿಕೆಯನ್ನು ನೀಡುವ

ಸಮಯದಲ್ಲಿ ಅಸಕ್ತರಾಗಿದ್ದರು ಅಂದರೆ ಸರಿಯಲ್ಲ. ಪ್ರಾಸಾ 5 ರವರ ಹೇಳಿಕೆಯನ್ನು ನಾನು ಆಸ್ಪತ್ರೆಯಲ್ಲಿಯೇ ಪಡೆದಿರುತ್ತೇನೆ. ಪ್ರಾಸಾ 5 ಇವರು ಅರೋಪಿತನ್ನು ಗುರುತಿಸಿಲ್ಲ ಅಂದರೆ ಸರಿ. ಮೃತರ ಕುಟುಂಬಕ್ಕೆ ಅನುಕೂಲವಾಗಬೇಕೆಂದು ಸುಳ್ಳು ಪ್ರಕರಣವನ್ನು ಮಾಡಲಾಗಿದೆ ಅಂದರೆ ಸರಿಯಲ್ಲ. ಮೃತರ ಕುಟುಂಬಕ್ಕೆ ಸಹಾಯವಾಗಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಇಲಾಖಾ ಅಂಕಿ ಅಂಶಗಳಿಗೊಸ್ಕರ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

(ಮರು ವಿಚಾರಣೆ ಇಲ್ಲ)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಅದೆ,

ಸಹಿ/-

ದಿವಾಣಿ ನ್ಯಾಯಾಧೀಶರು ಹಾಗೂ

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು